ಸೂರ್ಯ ಇವನೊಬ್ಬನೇ

ಶಾ. ಬಾಲುರಾವ್

ಸೂರ್ಯನನ್ನು ಕುರಿತ ನಲವತ್ತೆಂಟು 'ಕಲ್ಪನೆ'ಗಳು



ಸೂರ್ಯ
ಇವನೊಬ್ಬನೇ



ಸೂರ್ಯ ಇವನೊಬ್ಬನೇ

ಸೂರ್ಯನನ್ನು ಕುರಿತ ನಲವತ್ತೆಂಟು 'ಕಲ್ಪನೆ'ಗಳು

ಶಾ. ಬಾಲುರಾವ್

'ಕಾವೇರಿ'
೧೩೧ ಜೆ-ಎಕ್ಸ್‌ಟೆನ್‌ಷನ್, ಲಕ್ಷ್ಮೀನಗರ, ದಿಲ್ಲಿ-೧೧೦೦೯೨

© ಶಾ. ಬಾಲುರಾವ್

ಬೆಲೆ : ಹತ್ತು ರೂಪಾಯಿ

ಮಾರಾಟಗಾರರು :

ಗೀತಾ ಬುಕ್ ಹೌಸ್

ನ್ಯೂ ಸ್ಟ್ಯಾಚ್ಯೂ ಸ್ಕ್ವೇರ್, ಮೈಸೂರು-೫೭೦೦೦೧

SURYA IVANOBBANE

(*'He alone is the Sun'*)

Fortyeight Creations on the Sun

by S. Balu Rao

© The Author

Designed & Published by
the author at 'Kaveri'
131 J-Extension, Lakshmi Nagar, Delhi-110092

Cover-drawing & Decorations by
Pramod Ganapatye

Typeset by
Adfaces, G-6, Hans Bhawan Wing-II,
Bahadur Shah Zafar Marg, New Delhi-110002

Printed at
Shuchi (Pvt.) Ltd., 1-E Jhandewallan, New Delhi-110055

Copies available in Karnataka at :
Geetha Book House, New Statue Square, Mysore-570001

First Edition : 1980

Price : Rupees Ten

ಈ ಕೃತಿಯ ಬಗೆಗೆ ...

ಸುಮಾರು ಆರು ವರ್ಷಗಳ ಹಿಂದೆ ಒಂದು ಮುಂಜಾನೆ ನಿದ್ದೆಯಲ್ಲಿ ಯಾರೋ ಎದೆಯ ಮೇಲೆ ಹತ್ತಿ, ಕತ್ತು ಹಿಸುಕುತ್ತಿರುವಂತೆ ಕೆಟ್ಟ ಕನಸು. ತಡೆಯೋಣವೆಂದರೆ ಕೈ ಮೇಲೇಳದು ; ಕೂಗಿ ಕೊಳ್ಳೋಣವೆಂದರೆ ಧ್ವನಿಯೇ ಹೊರಡದು. ಆ ಸ್ಥಿತಿಯಲ್ಲಿ ಹೇಗೋ ಕಷ್ಟದಿಂದ ಕಣ್ಣುಬಿಟ್ಟು ನೋಡಿದಾಗ ಗಂಟೆ ಏಳಾಗಿ, ಎದುರುಕಿಟಕಿಯ ಕಂಬಿಗಳ ಮೂಲಕ ಸೂರ್ಯನ ಬೆಳ್ಳಿಬೆಳಕು ಧಾರೆಧಾರೆಯಾಗಿ ಸುರಿಯುತ್ತಿತ್ತು. ಆ ಕ್ಷಣ ಆ ಅನುಭವ ಗಟ್ಟಿ-ಗೊಂಡು, ಅರೆನಿದ್ದೆ ಎಚ್ಚರಗಳಲ್ಲಿಯೇ ಇದರಲ್ಲಿನ ಮೂರನೆಯ 'ಕಲ್ಪನೆ'ಯಾಗಿ ಈಗಿರುವಂತೆಯೇ ಮೂಡಿಬಂದಿತು.

ಇಲ್ಲಿ ಉತ್ತರದಲ್ಲಿ ಸೂರ್ಯ ಹೆಚ್ಚು ಜೀವಂತ, ವಾಸ್ತವ. ಅವನು 'ನಾನೆಂಟಿಟಿ'ಯಲ್ಲ, 'ರಿಯಾಲಿಟಿ'. ಬೆಳಗಾಗ ಪತ್ರಿಕೆಯ ಪುಟ ತೆರೆದೊಡನೆ ನಾವು ಮೊದಲು ನೋಡುವುದು ಅಂದು ಅವನು ಕೃಪೆಮಾಡಲಿರುವ ತಾಪಮಾನವನ್ನು. ಹೀಗಿದ್ದು, ಜತೆಗೆ ಆವೊತ್ತಿನ ಅನುಭವವೂ ಸೇರಿ, ಸೂರ್ಯ ನನಗೆ ಇದ್ದಿದ್ದೂ ಹತ್ತಿರವಾದ. ಮುಂದಿನ ಕೆಲವಾರು ತಿಂಗಳು ಮನಸ್ಸು ಅವನನ್ನೇ ಕುರಿತು ಧ್ಯಾನಿಸತೊಡಗಿತು. ಅವನು ಒಮ್ಮೊಮ್ಮೆ ಒಂದೊಂದು ರೂಪ, ಭಾವಗಳಲ್ಲಿ ಕಾಣಿಸಿಕೊಳ್ಳತೊಡಗಿದ. ಅದರ ಫಲ ಇದರಲ್ಲಿನ ನಲವತ್ತೆಂಟು 'ಕಲ್ಪನೆಗಳು'. ಇವುಗಳಲ್ಲಿ ಕೆಲವು ಸ್ಪಷ್ಟವಾಗಿ ಕವಿತೆಗಳು ; ಮತ್ತೆ ಕೆಲವು ಚಿತ್ರಗಳು, ಪ್ರತಿಮೆಗಳು ; ಒಂದೆರಡು ಗಾದೆ, ಒಗಟುಗಳಂತಹ ಚೇಷ್ಟೆಗಳು ; ಕೊನೆಯಲ್ಲಿ ಒಂದು ಪುಟ್ಟ ರೂಪಕವೂ ಇದೆ. ಒಟ್ಟಾರೆ ಎಲ್ಲವೂ ಸೃಜನಶೀಲ ಮನಸ್ಸಿನ ಸೃಷ್ಟಿ. ಎಂತಲೇ ಇವನ್ನು 'ಕಲ್ಪನೆಗಳು' ಎಂದು ಕರೆದಿದ್ದೇನೆ.

ನನ್ನ ಬರೆಹಗಳ ಬಗ್ಗೆ ನನ್ನೊಳಗಿರುವ ತೃಪ್ತಿ-ಅತೃಪ್ತಿಗಳ ಗೊಂದಲ, ಜತೆಗೆ ಸ್ವಂತದ ಅಲಕ್ಷ್ಯ, ಆಲಸ್ಯ, ಬಂಗಾರ ಮಾಡ ಲಾಗದೆಯೆ ಮುಟ್ಟಬಾರದೆಂಬ ಕೆಟ್ಟ ಹಟ, ಮೇಲೆ ಕನ್ನಡದ ವಕ್ಷಸ್ಥಳಕ್ಕೆ ಹೊರತಾಗಿ ಇಲ್ಲಿ ದಿಲ್ಲಿಯಲ್ಲಿ ಸೌಲಭ್ಯದೂರನಾಗಿರು ವುದು—ಈ ಎಲ್ಲ ಕಾರಣಗಳಿಂದಾಗಿ ಇದುವರೆಗೆ ಆರು ವರ್ಷಕಾಲ ಈ ಕೃತಿ ನನ್ನಲ್ಲಿಯೇ ಉಳಿದಿತ್ತು. ಈಗ ಮುಖ್ಯವಾಗಿ ಇಲ್ಲಿನ ಎಡ್‌ಫೇಸೆಸ್‌ನ ಕನ್ನಡಿಗ ಮಿತ್ರ ಶ್ರೀ ಸುಂದರ ಉದ್ಯಾವರ ಅವರಲ್ಲಿ ಮೊಳೆ ಜೋಡಿಸುವ ಸೌಕರ್ಯ ದೊರೆಯಿತೆಂದು ಅದು ಬೆಳಕು ಕಾಣುತ್ತಿದೆ. ಅವರಿಗೂ, ಜತೆಜತೆಗೆ ಒದ್ದಾಡಿದ ತಮಿಳ ಬಂಧು ಶ್ರೀ ತಂಬಿ ಶ್ರೀನಿವಾಸನ್‌ಗೂ, ಹಲವಾರು ಬಗೆಯಲ್ಲಿ ಸಹಕರಿಸಿದ ಇತರ ಮಿತ್ರರಿಗೂ ನಾನು ಕೃತಜ್ಞ.

"ಎಲ್ಲಿ, ಈಚೆಗೆ ನಿನ್ನದೇನೂ ಬರಲಿಲ್ಲವಲ್ಲ?" ಎನ್ನುವ ಮಿತ್ರರ ಪ್ರೀತಿಯ ಆತಂಕಕ್ಕೂ ಇದು ಅಲ್ಪ ಸಮಾಧಾನವಾಗಬಹುದು. ಆದರೆ ಅದಕ್ಕೆ ತೊಡಗಿರುವುದು ನನ್ನ ಮೂರು ತಿಂಗಳ ಸಂಬಳ ಅಥವಾ ಮೂರು ವರ್ಷಗಳ ಉಳಿತಾಯ. ಬರವಣಿಗೆಯ ಷೋಕಿ ಬಲು ದುಬಾರಿ!

ಹೊಸ ದಿಲ್ಲಿ — ಶಾ. ಬಾಲುರಾವ್
ವಿಜಯ ದಶಮಿ :
೧೯ ಅಕ್ಟೋಬರ್ ೮೦

೧

ಮಣ್ಣಲ್ಲ, ಮರವಲ್ಲ.
ಯಾರೋ ಕಲ್ಲುಕಂಚುಗಳಲ್ಲಿ ಕಡೆದು
ಪ್ರಾಣಪ್ರತಿಷ್ಠಾಪಿಸಿ ನಿಲ್ಲಿಸಿದ
ಊರಗುಡಿಯ ವಿಗ್ರಹವಲ್ಲ.
ಇದ್ದೊ ಇಲ್ಲದೆಯೊ
ಬಲ್ಲವರು ಬಣ್ಣಕಟ್ಟಿ ನಂಬಿಸಿದ
ಪುರಾಣಸೃಷ್ಟಿ ಇವನಲ್ಲ.
'ಅಲ್ಲ', 'ಅಲ್ಲ'ಗಳ ಅಶರೀರಿಯಲ್ಲ.
ಆಣೆ, ಪ್ರಮಾಣ
ತರ್ಕ
ವಾದವಿವಾದ, ವಿತಂಡ—



ಇವ್ಯೊಂದನ್ನೂ ಬೇಡದೆಯೆ
ಪ್ರಶ್ನೆಯಿಲ್ಲದ ಉತ್ತರವಾಗಿ
ತನ್ನ ಹಕ್ಕಿಂದ ತಾನು
‘ಇರು’ವವನು.
ಎಲ್ಲರರಿಕೆಗೆ ಸಿಗುವ, ಕಾಣ್ಕೆಗೆ ನಿಲುವ
ಅಂಗೈ ನೆಲ್ಲಿ
ಬೆಳಕಿನ ಉಂಡೆ.
ನೂರಕ್ಕೆ ನೂರು ಪೈಸೆ ಸತ್ಯ
ನಿತ್ಯ, ವಾಸ್ತವ, ದಿವ್ಯ.

ಇರುವನೆಂದದ್ದಕ್ಕೆ
ಇದ್ದ ಶಾಸ್ತ್ರವ ಮಾಡಿ
ದೂರ ಉಳಿದವನಲ್ಲ.
ದಿನವೂ ಬರುವವನು
ಸದಾ ನಗುನಗುತ
ಜನರ ಜತೆಗಿರುವವನು
ಕೇಳದೆಯೆ ಕೊಡುವವನು
ಸಸ್ಯದೊಳಗಿನ ಹಸಿರು
ಧಾನ್ಯದೊಳಗಿನ ಕಾಳು
ಪುರುಷನೊಳಗಿನ ಅಗ್ನಿ
ಕಣ್ಣಿನೊಳಗಿನ ವಜ್ರ
ಕವಿತೆಯೊಳಗಿನ ರಸ

ರಕ್ತ, ವೀರ್ಯ
ಗಂಧ, ವರ್ಣ, ಸ್ವರ.
ದೇವರೆಂದರೆ
ಸೂರ್ಯ
ಇವನೊಬ್ಬನೇ.
ತೊಗೊ, ಆರ್ಯ
ನಿನಗಿದು ನಿನ್ನಿಂದಲೇ ಪಡೆದ
ನಾಲ್ಕು ಹನಿ ಅರ್ಘ್ಯ.

೨

ಜಗದ ಸೂರೇರಿ ಕುಳಿತ
ಎಂತಲೇ ಇವ ಸೂರ್ಯ
—ಇದೂ ನಿಷ್ಪತ್ತಿ.

೩

ದೀರ್ಘ ದುಃಸ್ವಪ್ನಗಳ ರಾತ್ರಿಯ ಕೊನೆಗೆ
ತಾಯ ಮೈದಡವಿನಭಯದ ರಕ್ಷೆ
ಈ ಸೂರ್ಯೋದಯ.

೪

ಅದೆ ಹಳೆಮನೆ—
 ದಿನದಿನವೂ ಇವ ಬಳಿಯುವ
 ಬೆಳ್ಳಿಯ ರೇಕು.

ಅದೆ ಹಳೆಗೈ—
 ದಿನದಿನವೂ ಅದು ಬರೆದಿದೆ
 ಹೊಸ ತಾರೀಕು.

೫

ಅಂತರಿಕ್ಷದ ತೊಟ್ಟಿಲಲ್ಲೊಂದು ಮಗು
ಮುಂಜಾನೆ ಎದ್ದೊಡನೆ
ಕಿಲಕಿಲ ಅದರ ನಗು
ಆಯಿತಿಲ್ಲಿ ಬೆಳಗು—
ಹೊರಗು, ಒಳಗು.

೬

ದಿನವೂ ಬೆಳಗಾಗ
ನಮ್ಮ ಹಳ್ಳಿಗೆ
ಈ ದೊರೆಮಗ ಬರುವುದೊಂದು
ಮಹಾಸಂಭವ.
ಅದರ ಸಂಭ್ರಮ ಕೇಳಿ:
ಎಲ್ಲೆಲ್ಲೂ ಕೆಂದೂಳಿನ ಕುಂಕುಮಪೂಜೆ
ಹೊಗೆಮಂಜಿನ ಧೂಪ
ಅರಳುಮೊಗ್ಗಿನ ಗಂಧಾರ್ಚನೆ
ಹೂತಟ್ಟೆಯಾರತಿ
ದನಕರುಗಳ ಕೊರಳ ಘಂಟಾನಾದ
ಹಕ್ಕಿಯುಲಿ ಓಲಗ
ಜನರ 'ಎದ್ದಿರಾ ನಮಸ್ಕಾರ'ಗಳ ಮಂತ್ರೋಚ್ಚಾರ.

ಉದೋ ಉಧೋ, ದೊರೆಯೆ
ಉದೋ ಉಧೋ.

೭

ಏಳೇಳೊ ಸೂರ್ಯ !
ಸುಂದರ್ರ ! ಸುಕುಮಾರ !
ಬೇಗೆದ್ದು ಸಜ್ಜಾಗಿ
ಏಳು ಕುದುರೆಯ ಹತ್ತಿ
ಏಳು ಕಡಲನು ದಾಟಿ
ನೀ ಬರುವೆಯೆಂದು,
ಊರ ಸೂರ್ಯಕಾಂತಿಯರೆಲ್ಲ
ಹೂತಟ್ಟೆ ಹಿಡಿದು
ಆರತಿಗೆ ಕಾದಿದ್ದಾರೆ.

೮

ಇವನು
ಮುತ್ತೈದೆ ಉಷೆಯ
ಹಣೆಯ ಕುಂಕುಮಬೊಟ್ಟು,
ಭೂಮಿಭಾಗ್ಯದ ಗುಟ್ಟು.



ಬೆಳಗಾದೊಡನೆ ಬಂದು
ಮನೆಮನೆಯ ಬಾಗಿಲು
ಬಡಿದು ಹೋಗುತ್ತಾನೆ.
ಕಾಣದು ಕೈ !
ಕೇಳದು ಶಬ್ದ !

೧೦

ದಿನವೂ ಮುಂಜಾನೆ
ಕರೆಯುದೆಯೆ ಬಂದು ಕರೆಯುುವಳು
ಕೆಂದನೆಯು ತುಂಬುಗೆಚ್ಚಲ ಕಾಮಧೇನು
ಭೂಮಿಕರು
ಕುಡಿದು ಚೆಲ್ಲಾಡುವಷ್ಟು ಹಾಲುಬೆಳಕು.

೧೧

ಮುಂಜಾನೆ
ಮೂಡಣ ಗದ್ದೆಕಣದಲ್ಲಿ
ಸುಗ್ಗಿ.
ಬೆಳ್ಳಿಕೊಳಗದಲಿ
'ಬಂಗಾರ ಸಣ್ಣ'ವನ್ನಳೆದು
ಮುಗಿಲೆತ್ತರ
ದವಸ ಒಟ್ಟಿದ್ದಾರೆ.

೧೨

ಇವನ ಏಳುಕುದುರೆಗಳಲ್ಲಿ
ಒಂದೇ ಒಂದು ಮುಗ್ಗರಿಸಿ
ಗಾಡಿಯ ಗಾಲಿ ಮುರಿದರಾಯಿತು
ಅಹಾ, ನಮಗಾಗ ಸದಾ ಹಗಲು!

೧೩

ಇದು ಬೆಳಕಲ್ಲ,
ಆ ಲೋಕದಾಲೋಕವೆಂತೆಂದು
ತೆರೆದು ತೋರಿಸುವ
ಆಕಾಶದಲ್ಲೊಂದು
ಪುಟ್ಟ ದುಂಡನೆಯ
ಬೆಳಕಂಡಿ.

೧೪

ಮುಂಜಾನೆ ಬೇಗೆದ್ದು
ಮೂಡಲ ಕಡಲಲ್ಲಿ ಮಿಂದು, ಮಡಿಯುಟ್ಟು
ಮನೆಮನೆಬಾಗಿಲಿಗೆ ಬಂದು
ಬಾಯಿತುಂಬ ಹರಸಿದ್ದಾನೆ
ಬ್ರಾಹ್ಮಣ.

೧೫

ಈ ರೈತ
ಉಳುವುದು
ಅಲ್ಲಿ ಆಕಾಶ,
ಬೆಳೆಯುವುದು
ಇಲ್ಲಿ ಭೂಮಿ.

೧೬

ದಿನವೂ
ಭೂಮಿಯ ಮೇಲೆ
ಬೆಳಕಿನ ಬೀಜ ಬಿತ್ತಿ
ಬದುಕ ಬೆಳೆದಿದ್ದಾನೆ
ಒಕ್ಕಲಮಗ.

೧೭

ಮುಂಜಾನೆ
ನಾವುನೀವೇಳುವ ಮೊದಲೇ ಎದ್ದು
ಕೋಟಿಕಡ್ಡಿಗಳ ಕಸಬರಿಕೆ ಹಿಡಿದು
ಆಕಾಶದುದ್ದಕ್ಕು ಹಾದಿಬೀದಿಗಳಲ್ಲಿ
ಮಂಜುಧೂಳನ್ನು ಗುಡಿಸಿ
ಬೆಳಕುನೀರನ್ನು ಸಿಂಪಡಿಸಿ—
ಇದೊ, ಜರ್ಬಾಗಿ ಎಲೆಅಡಿಕೆ ಜಗಿಯುತ್ತ
ನಿಂತಿದ್ದಾನೆ ನೋಡಿ
ಜಾಡಮಾಲಿ.

೧೮

ಅದೇನು ಆ ಮೂಲೆಯಲ್ಲಿ ಬೆಂಕಿ
ಮೈಸುಡುವಂಥ ಝಳ
ಕಣ್ಣಲ್ಲೆಲ್ಲ ಕಿಡಿ, ಕಿಟ್ಟ ಅಂತಂದಿರಾ ?
ಅದು ನಮ್ಮೂರ
ಕಮ್ಮಾರ
ಸೂರ್ಯಭದ್ರಾಚಾರಿಯ ಕರ್ಮಶಾಲೆ.
ಹೊತ್ತಾರೆ ಎದ್ದು, ತಿದಿ ಕಟ್ಟಿ, ಕುಲಿಮೆ ಹೂಡಿ
ಸವೆದ ಗಾಡಿಯ ಗಾಲಿಗೆ
ಹೊಸ ಪಟ್ಟೆ ಕಟ್ಟುತ್ತಿದ್ದಾನೆ—
ನಮ್ಮ ರಥ
ದುರಸ್ತಾಗಿ ನಡೆದಿರಲೆಂದು.



೧೯

ಕಲ್ಲು ನೀರು
ಹುಲ್ಲು ಹಸಿರು
ಎಲ್ಲೆಂದರಲ್ಲಿ ಮುಖನೋಡಿಕೊಳ್ಳುತ್ತ ನಿಲುವ
ತನ್ನ ಚೆಲುವಿಗೆ ತಾನೇ ಒಲಿವ
ಚೆಲುವನಿವ
ನಾರ್ಸಿಸಸ್.

ಲೋಕದ ಭಾಗ್ಯ
ಇವನ ಸಮಾಜವಾದ.
ಉಳ್ಳಪ್ಪ, ಇಲ್ಲಪ್ಪರೆಲ್ಲರಿಗು
ಇವನ ಒಂದೆ ಬೆಳ್ಳಿತಟ್ಟೆಯಲೆ ಊಟ.



೨೧

ಛೀ ನಾಚಿಕೆಗೇಡಿ!
ಎಲೆಸಂದು
ಸೂರು
ಬಾಗಿಲ ಕಂಡಿ
ಎಲ್ಲೆಂದರಲ್ಲಿ ಹಣಿಕಿಹಾಕುವುದೇನು?

೨೨

ನಿಜ ಹೇಳು,
ಯಾರ ಪ್ರೀತಿಯ ಕೊಡಿಗೆ
ಮುಖದ ಮೇಲಿನ ಈ ಕಲೆ—
ಛಾಯೆಯದೆ ?
ಸ್ವಾತಿಯದೆ ?

೨೩

ಒಂದು ಕ್ಷಣ ಜತೆಬಿಡದೆ
ಇವನು ಹೋದಲ್ಲೆಲ್ಲ
ನೆರಳಾಗಿ ಹಿಂಬಾಲಿಸಿದ್ದಾಳೆ
ಮಡದಿ ಛಾಯೆ.

೨೪

ಇದ್ದರಿವನಂತೆ ಇರಬೇಕು :
ಕೋಣೆಮೂಲೆಯ ಹಣತೆ-
  ಯಂತೆಲ್ಲರಿಂದಲು ದೂರ ;
ಆದರೂ ಇವನಿಲ್ಲದೆಯೆ ಜರುಗದು
  ಒಂದಾದರೂ ವ್ಯವಹಾರ.

೨೫

ಮೇಲೊಂದು ಕೆಂಜೇಡ.
ಆಕಾಶದುದ್ದಗಲ
ಅದರ ಕದಿರಿನ ಜಾಲ.
ಜಗದ ಜೀವಕೋಟಿಯನ್ನೆಲ್ಲ
ಕಟ್ಟಿ ಬಂಧಿಸಿ
ಹಿಡಿದು ಆಡಿಸಿದೆ
ಬದುಕು-ಸಾವಿನ ಆಟ.



೨೬

ಮೊಸರ ಕಡಲಲ್ಲೊಂದು
ಬೆಣ್ಣೆಯ ಮುದ್ದೆ—
    ನೋಟಕ್ಕುಂಟು,
    ಊಟಕ್ಕಿಲ್ಲ!

೨೭

ಮರದ ಕೊಂಬೆಗಳ ನಡುವೆ
ಸಿಕ್ಕಿ ನೇತಾಡುತ್ತಿರುವ
ಈ ಕೆಂಪನೆಯ ಹರಬರಕು ಗಾಳಿಪಟ—
ಎಲ್ಲಿ, ಹುಡುಕಿ, ನೋಡೋಣ
ಇದರ ಸೂತ್ರದ ದಾರ ?

೨೮

ಕಿತ್ತು, ಸಿಪ್ಪೆ ಸುಲಿದು
ತೊಳೆತೊಳೆ ಬಿಡಿಸಿ
ತಿಂದು ಚಪ್ಪರಿಸಬೇಕೆನ್ನುವಂತಿದೆ
ಆಕಾಶವೃಕ್ಷದ ಈ ಕಿತ್ತಳೆ—
ಯಾರಾದರೂ ಕಿತ್ತುಕೊಟ್ಟರೆ!

೨೯

ಎಲ್ಲೆಯಿಲ್ಲದ ಕಡಲಲ್ಲೊಂದು
ಎಲೆಯಗಲದ ಹರಿಗೋಲು.
ಅದರಲ್ಲೊಂದು ಒಂಟಿ ಅಂಬಿಗರ ಮಗು.
ಕೈಯಲ್ಲಿ ಕೋಟಿ-ಹುಟ್ಟುಗೋಲು.
ಏಳುತ್ತ, ಬೀಳುತ್ತ
ಹಗಲುರಾತ್ರಿಗಳ ಮೊಳಹಾಕಿ
ಅನಾದಿ-ಅನಂತಗಳ ನಡುವೆ ದಾರಿ ಅಳೆಯುತ್ತ
ಯಾವದೋ ಶಾಪ ಸವೆಸುತ್ತಿದೆ.

೩೦

ಅಲ್ಲಿ
ಹೊರಗೊಬ್ಬ
ಇಲ್ಲಿ
ಒಳಗೊಬ್ಬ.
ಸೂರ್ಯರಿಬ್ಬರ ನಡುವೆ
ಬೆಳಗಾಯ್ತು ಬಾಳು.

೩೧

ವಿನಯದಲ್ಲಿ ಬಗ್ಗಿನಡೆದರೆ
ಕಣ್ಸೆಳೆದು
ಕತ್ತೆತ್ತಿಸಿ
ಸ್ವಾಭಿಮಾನ ಕಲಿಸುತ್ತಾನೆ.

ಸ್ವಾಭಿಮಾನದಲ್ಲಿ ಕತ್ತೆತ್ತಿ ನಡೆದರೆ
ಕಣ್ಣುಕ್ಕಿ
ತಲೆತಗ್ಗಿಸಿ
ವಿನಯ ಬೋಧಿಸುತ್ತಾನೆ.

೩೨

ಇವನ ಹಗಲೇ
ನಮ್ಮ ಹೆಗಲು.
ಅದಿರುವವರಿ(ರೆ)ಗೆ
ಯಾರ ದಿಗಿಲು !

೩೩

ಸಂಕ್ರಾಂತಿ.
ಹುಗ್ಗಿಯೌತಣ ಉಂಡು
ಎಳ್ಳುಬೆಲ್ಲದ ಬುತ್ತಿ ಕಟ್ಟಿಕೊಂಡು
ಕೈಯಲ್ಲಿ ಕಬ್ಬಿನ ಜಲ್ಲೆಕೋಲು ಬೀಸುತ್ತ
ಹೊರಟಿದ್ದಾನೆ
ಸೂರ್ಯನಾ ರಾಯ ಣ
ಉತ್ತರಾಯಣ—
ದೀರ್ಘಪ್ರಯಾಣ.

೩೪

ಒಳಗಾವ ದಳ್ಳುರಿಯೊ ಏನೊ
ತಾನೂ ಉರಿದು
ಲೋಕವನ್ನೂ ಉರಿಸಿದ್ದಾನೆ
ಉರಿವೋರೆ.

೩೫

ಬಿಡೊ, ಬಿಡೊ, ನೀನೇನು ಮಹಾ!
ನಿನ್ನಂಥ ನೂರು ಹಗಲಸೂರ್ಯರು
ಯೌವನದ ಆ ಮೊದಲರಾತ್ರಿಗಳಲ್ಲಿ
ನನ್ನೊಳಗೂ ಸಿಡಿದದ್ದುಂಟು!

೩೬

ಮನೆಯ ಮಾಡನು ಹತ್ತಿ
ನೆತ್ತಿಯ ಮೇಲಿಂದ
ಹೆಂಚಿನ ಸಂದಿ
ಇಣಿಕಿನೋಡಿದೆ
ಕೆಂಪುಮೋರೆಯ ಕೋತಿ—
  ಜೋಕೆ, ಕೆಳಗಿಳಿದುಬಂದು
  ಮುಖ ಪರಚೀತು !

೩೭

ಬೇಸಿಗೆಯ ಹಗಲು
ಬಿರುಗಾಳಿ ಬೀಸಿ ಧೂಳೆದ್ದಾಗ
ಈ ಹುಂಜದ ಅವಸ್ಥೆ ಬೇಡ !
ಜುಟ್ಟುದುರಿ
ರೆಕ್ಕೆಪುಕ್ಕಗಳೆಲ್ಲ ತರಿದು
ಜಂಬ ಹರಿದು
ಅದೊಂದು ಬರಿಯ ಮಾಂಸದ ಮುದ್ದೆ.

೩೮

ಬೇಸಿಗೆಯುದ್ದಕ್ಕೂ
ಕಂಠಭರ್ತಿ ಕುಡಿದು
ಈಗ ಮಳೆಗಾಲದಲ್ಲಿ
ಕಕ್ಕುತ್ತಿದ್ದಾನೆ
ಕುಡುಕ.

೩೯

ಎಲಾ ಇವನ!
ಮಾಮೂಲಿನಂತೆ
ಈ ಮಾಗಿಯ ಹಗಲೂ ಬರುವ,
ಒಲೆ ಹಚ್ಚಿ, ಬಿಸಿಯಡಿಗೆ ಅಟ್ಟು,
ಉಣಬಡಿಸುವ ಎಂದು ಕಾದಿದ್ದಕ್ಕೆ
ಹೋಗಿ ಚಳಿಹಿಡಿದವನಂತೆ
ಗಡಗಡ ನಡುಗುತ್ತ
ಮೋಡಗಂಬಳಿ ಹೊದ್ದು ಮಲಗಿಯೇಬಿಟ್ಟನಲ್ಲ
ಅಡಿಗೆಭಟ್ಟ.

೪೦

ಇವನೊಬ್ಬ ವಿಚಿತ್ರ ಅತಿಥಿ.
ಬೇಸಿಗೆಯ ಹಗಲು
'ಯಾಕಪ್ಪ ಬಂದ?' ಎಂದನ್ನಿಸುವಂತೆ ಉರಿದು,
ಅದೇ ಮಾಗಿಯ ರಾತ್ರಿ
'ಈಗಿರಬಾರದಿತ್ತೆ?' ಎಂದು ಕೊರಗಿಸುತ್ತಾನೆ.

೪೧

ತದ್ವತ್ ಅಪ್ಪನೇ ಇವನು :
ಒಂದು ಕ್ಷಣ ಕೋಪ
ಮರುಕ್ಷಣವೆ ಪ್ರೀತಿ—
ಎರಡೂ ಮಿತಿಯಿಲ್ಲದಷ್ಟು ಅತಿ.

ಆಗ ಬೇಸಿಗೆಯಲ್ಲಿ
ಮೈಬೊಬ್ಬೆ ಬರುವಂತೆ ಬಾರಿಸಿದ್ದೇನು,
ಈಗ ಪೂಗಿಯ ಬೆಳಗ್ಗೆ ಬಂದು
ಮೃದುವಾಗಿ ಮೈನೇವರಿಸುವುದೇನು !

೪೨

ದಿನವೂ ಮುಂಜಾನೆ ಹುಟ್ಟಿ
ಸಂಜೆ ಸಾಯುವುದು
ಇವನ ವಿಚಿತ್ರ ಅಮರತ್ವ !

೪೩

ಸಂಜೆ
ಪಡುವಣದ ಓಣಿಯಲಿ
ಕೆಂಬಣ್ಣದೋಕುಳಿ—
ಸೂರ್ಯಕಾಮನ ಹೋಳಿ.

೪೪

ಅಯ್ಯಯ್ಯೊ ! ಹಿಡೀರಿ, ಹಿಡೀರಿ!
ಮಗು
ಆಡಾಡುತ್ತ ಹೋಗಿ
ಕಾಲುಜಾರಿ
ದುಡಮ್ಮನೆ ಕಡಲಲ್ಲಿ ಮಗುಚಿಕೊಂಡಿತು.

೪೫

ಅಯ್ಯಯ್ಯೊ! ಬೆಂಕಿ! ಬೆಂಕಿ!
ಪಡುವಣಮನೆಗೆ
ಬೆಂಕಿಬಿದ್ದಿದೆ!

೪೬

ಮಾಗಿಯ ಮುಸ್ಸಂಜೆ
ಪಶ್ಚಿಮಘಟ್ಟದಲ್ಲಿ
ಇವನ ಹೆಣ
ಸುಟ್ಟು ಬೂದಿಯಾಗುತ್ತಿದೆ.

ಆ ಇಳಿಬೆಂಕಿಯಲ್ಲೇ
ಮೈಕೈಕಾಯಿಸಿಕೊಳ್ಳುತ್ತ ಕುಳಿತಿದ್ದಾರೆ
ಮನೆಮನೆಯ ಜಗಲಿಯ ಮೇಲೆ
ಮುದುಕಮುದುಕಿಯರು.

೪೭

ಈ ಹುಲಿಗೆ
ತಾ ಹೆತ್ತ ಹಗಲೆ ಹಗೆ.
ಇಡಿಯ ದಿನ ಅದರ ಬೆನ್ನಟ್ಟಿ
ಕೊನೆಗೂ ಸಂಜೆ
ಆಕಾಶದಂಚಿನಿಕ್ಕಟ್ಟಿನಲಿ
ಬೇಟೆಯ ಸಿಗಿಸಿ
ಹಾರಿ
ಹಿಡಿದು
ಸಿಗಿದು
ತುಂಡರಿಸಿ ಚೆಲ್ಲಾಪಿಲ್ಲಿ ಎಸೆಯುವುದು
ನೆಲದ ಮೇಲೆಲ್ಲೆಲ್ಲು
ಹುಲಿಯ ಬಾಯಲ್ಲು
ರಕ್ತ, ಮಾಂಸ
ಬೀಭತ್ಸ.
ಈ ಪುತ್ರಹತ್ಯೆಯ ನೋಡಿ ಹೇಸಿದ
ರಾತ್ರಿ
ಕತ್ತಲ ಕವಚಿ
ಆಟ ಮುಗಿಸುವುದು.

೪೮

ಒಂದು ದಿನ
ದಾರಿತಪ್ಪಿ ಭೂಮಿಗೆ ಬಂದ
ಪಾತಾಳವಾಸಿ ಮಣ್ಣುಹುಳುವೊಂದು
ಒಮ್ಮೆ ಕತ್ತೆತ್ತಿ ಸುತ್ತಲೂ ನೋಡಿ
ಕಣ್ಣುಜ್ಜಿಕೊಳ್ಳುತ್ತ
'ಛೆ, ಏನಿಲ್ಲಿ ಇಷ್ಟು ಕತ್ತಲು?' ಅಂದಿತು.
ಅದನ್ನ ಕೇಳಿಸಿಕೊಂಡ ಸೂರ್ಯ
'ತಪ್ಪಾಯ್ತು, ಕ್ಷಮಿಸು' ಅಂದವನೆ
ನಗುತ್ತ
ಮೆಟ್ಟಲಿಳಿದು ಪಶ್ಚಿಮದಲ್ಲಿ ಮರೆಯಾದ.